ದಿನಾಂಕ : 07.02.2023 ಒ.ಎಸ್ 05/2020

ಪಿ.ಡಬ್ಲ್ಯೂ - 01

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:-** ಶ್ರೀ ಎನ್.ಆರ್.ಡಿ ವಕೀಲರಿಂದ ಪ್ರತಿವಾದಿ ನಂ.1(ಎ) ರಿಂದ 1(ಸಿ) ಪರವಾಗಿ

ದಾವಾ ಆಸ್ತಿಯು ಪರಸಪ್ಪ ಬಿನ್ ಸಣ್ಣಪ್ಪ ರವರ ಕಡೆಯಿಂದ 1941-42 ರಲ್ಲಿ ನರಸಪ್ಪ ಬಿನ್ ಕೆಂಜಡಿಯಪ್ಪ ರವರು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯ ತಾತ ಕೆಂಜಡಿಯಪ್ಪ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ತಂದೆಯ ಹೆಸರು ದಾಸಪ್ಪ.

ದಾಸಪ್ಪನಿಗೆ ಜಗನ್‌ಮೂರ್ತಿ ಎಂಬ ಒಬ್ಬನೇ ಮಗ ಎಂದರೆ ಸರಿ. ಸಾಕ್ಷಿ ಮುಂದುವರಿದು ದಾಸಪ್ಪನಿಗೆ ಉಷಾದೇವಿ ಮತ್ತು ಮಂಜುಳ ಎಂಬ ಇಬ್ಬರು ಹೆಣ್ಣು ಮಕ್ಕಳೂ ಸಹ ಇರುತ್ತಾರೆ. ದಿನಾಂಕ 04.12.2008 ರಂದು ದಾಸಪ್ಪ ಮತ್ತು ಅವರ ಮಗ ಜಗನ್ ಮೂರ್ತಿ ರವರು 1 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸ.ನಂ.340/ಪಿ1 ಕ್ಷೇತ್ರ 01 ಎಕರೆ 07 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ.

ನಿಪಿ-16 ನ್ನು ನೋಡುತ್ತಿದ್ದು, ನಿಪಿ-16 ರಲ್ಲಿ ನಮೂದಿಸಿರುವ ಜಮೀನನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಪಹಣಿ ಕರಿಯಪ್ಪ ಬಿನ್ ಕರಿಯಪ್ಪ ರವರ ಹೆಸರಿನಲ್ಲಿದೆ ಎಂದರೆ ಸರಿ. ನಿಪಿ-17 ನ್ನು ತೋರಿಸುತ್ತಿದ್ದು ಸದರಿ ಪಹಣಿ ಪತ್ರಿಕೆಯು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ. ಸಾಕ್ಷಿ ಮುಂದುವರಿದು ನಾವು ತಕರಾರು ಮಾಡುವ ಪೂರ್ವದಲ್ಲಿ 1 ನೇ ಪ್ರತಿವಾದಿ ತನ್ನ ಹೆಸರಿಗೆ ಪಹಣಿ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ.

ಸ.ನಂ.340/1 ನ್ನು ಎ.ಡಿ.ಎಲ್.ಆರ್. ರವರು ಆದೇಶ ಮಾಡಿ ಸ.ನಂ.340/2 ಎಂದು ಹೊಸ ನಂಬರ್ ನೀಡಿರುತ್ತಾರೆ ಎಂದರೆ ಸಾಕ್ಷಿಯು ಮೋಸ ಮಾಡಿ ಆ ರೀತಿ ಹೊಸ ನಂಬರ್ ನ್ನು ನೀಡಿರುತ್ತಾರೆ ಎಂದು ಹೇಳುತ್ತಾರೆ.

ಈಗ ನನಗೆ ಒಂದು ವಂಶವೃಕ್ಷವನ್ನು ತೋರಿಸಿದ್ದು ಅದನ್ನು ಓದಿ ನೋಡಿದ್ದು, ಅದು ದಾಸಪ್ಪನ ವಂಶವೃಕ್ಷವಾಗಿದ್ದು, ಸರಿಯಾಗಿರುತ್ತದೆ. ಸದರಿ ವಂಶವೃಕ್ಷವನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರ ಮೇಲೆ ಇರುವುದು ಜಗನ್‌ಮೂರ್ತಿಯ ಸಹಿ ಅಲ್ಲ ಎಂದರೆ

ಸರಿಯಲ್ಲ.

ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ನಾನು ನನ್ನ ಹೆಂಡತಿಯ ಕಡೆಯಿಂದ ಸುಳ್ಳು ದಾವಾ ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 04.12.2008 ರಂದು ದಾಸಪ್ಪ ಮತ್ತು ಆತನ ಮಗ ದಾವಾ ಜಮೀನನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದರಿಂದ ದಾಸಪ್ಪ ಮತ್ತು ಆತನ ಮಗ ದಾವಾ ಜಮೀನಿನ ಮೇಲೆ ತಮ್ಮ ಹಕ್ಕನ್ನು ಕಳೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. 2019 ನೇ ಇಸವಿಯಲ್ಲಿ ದಾವಾ ಜಮೀನನ್ನು ಮರಣ ಶಾಸನದ ಮೂಲಕ ವರ್ಗಾವಣೆ ಮಾಡುವ ಅಧಿಕಾರ ದಾಸಪ್ಪನಿಗೆ ಇರಲಿಲ್ಲ ಎಂದರೆ ಸರಿಯಲ್ಲ. 2015 ರಿಂದ ದಾಸಪ್ಪ ಅನಾರೋಗ್ಯ ಪೀಡಿತರಾಗಿದ್ದರು ಎಂದರೆ ಸರಿಯಲ್ಲ. ದಾಸಪ್ಪನಿಗೆ ದಾವಾ ಆಸ್ತಿಯ ಮೇಲೆ ಹಕ್ಕು ನಷ್ಟವಾಗಿದ್ದರಿಂದ ದಾಸಪ್ಪನ ಮರಣ ನಂತರ ವಾದಿಗೆ ಯಾವುದೇ ಉತ್ತರಾಧಿಕಾರದ ಹಕ್ಕು ಬಂದಿದರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿ ದಾಸಪ್ಪನ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಆಸ್ತಿ ದಾಸಪ್ಪನ ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ ಆತನಿಗೆ ಮರಣ ಶಾಸನ ಬರೆಯುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. 1(ಎ) ರಿಂದ 1(ಇ) ನೇ ಪ್ರತಿವಾದಿಯರು ದಾವಾ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಾವು ದಾವಾ ಸ್ವತ್ತಿನ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಮರಣ ಶಾಸನದ ಆಧಾರದ ಮೇಲೆ ವಾದಿಯು ದಾವಾ ಸ್ವತ್ತಿನ ಸಂಪೂರ್ಣ ಮಾಲೀಕಳಾಗಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ನಂ.1(ಎ) ರಿಂದ 1(ಸಿ) ನೇ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ